

ಸುಮತಿ ಶೆಟ್ಟಿ





ಕಲಾಕೃತಿಗಳೇ ಸಾಕ್ಷಿ.

ಹಾಗೆ ನೋಡಿದರೆ ಸುಮತಿ ಅವರು ಹುಟ್ಟು ಕಲಾವಿದೆಯಲ್ಲ. ಹಾಗೆಂದು ಕಲಾ ತರಗತಿಗಳಿಗೆ ಹೋಗಿ ಶಿಸ್ತುಬದ್ಧ ತರಬೇತಿಯನ್ನೂ ಪಡೆದವರಲ್ಲ. ಚಿಕ್ಕವಯಸ್ಸಿನಲ್ಲಿ ಅರಳಿದ ಕಲಾಪ್ರೀತಿಯನ್ನು ಜೀವಂತವನ್ನಾಗಿಸಿಕೊಂಡು ಇದರಲ್ಲೇ ತೊಡಗಿಸಿಕೊಂಡವರು. ತನ್ನ ಸಾಮಾನ್ಯವಾದ ಮನೆಗೆ ವಿಭಿನ್ನ ಕಲಾಸ್ಪರ್ಶ ನೀಡಿ ಇಡೀ ಊರಿಗೆ ಮಾದರಿಯಾಗಿರುವುದು ಈ ಮಹಿಳೆಯ ವಿಶೇಷ. 74 ವರ್ಷದ ವಯಸ್ಸಿನ ಸುಮತಿಯವರು ತಮ್ಮ ಬಿಡುವಿನ ಸಮಯವನ್ನು ವ್ಯರ್ಥ ಮಾಡದೇ ನಿರುಪಯುಕ್ತ ವಸ್ತುಗಳಿಗೆ ತಮ್ಮದೇ ಆದ ಕಲಾಸ್ಪರ್ಶ ನೀಡಿದ್ದಾರೆ. ಅದೇ ರೀತಿ ಇವರ ಊರು ಕಿನ್ನಿಗೋಳಿಯ ಕೆಮ್ರಾಲ್ ಗ್ರಾಮ ಅಕ್ಕಪಕ್ಕದ ಊರಿಗೆ ಮಾದರಿಯಾಗುವ ಹಾಗೆ ಮಾಡಿದ್ದಾರೆ.

ಮದುವೆಯ ನಂತರ 40 ವರ್ಷಗಳ ಕಾಲ ಮುಂಬೈಯಲ್ಲಿ ವಾಸವಾಗಿದ್ದರೂ ಅಲ್ಲಿಯೂ ಸಹ ಕಲಾಸೇವೆಯನ್ನು ಮುಂದುವರೆಸಿದರು. ಈಗ ಅವರು ತಮ್ಮ ಊರಾದ ಕೆಮ್ರಾಲ್‌ನಲ್ಲಿ ತಮ್ಮ ವಾಸದ ಮನೆ, ತೋಟ, ಅಂಗಳಕ್ಕೆ ವಿಭಿನ್ನ ರೂಪ ನೀಡಿ ಎಲ್ಲರಿಗೂ ಮಾದರಿಯಾಗಿದ್ದಾರೆ. ಕಸದಿಂದ ರಸದ ಕಲ್ಪನೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮಾದರಿಯಾಗಲೆಂದು ಅಲ್ಲಿಯ ಅಧ್ಯಾಪಕರು ಅಕ್ಕಪಕ್ಕದ ಶಾಲಾ ಕಾಲೇಜುಗಳಿಂದ ಮಕ್ಕಳನ್ನು ಕರೆದುಕೊಂಡು ಬಂದು ಇವರ ಕಲಾಕೃತಿಗಳ ಪರಿಚಯ, ಸಾಧನೆಯನ್ನು ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಪರಿಸರ ಪ್ರೇಮ ಕಲಾಪ್ರೀತಿ ಹೆಚ್ಚಿಸಲು ಸಹಾಯಕಾರಿಯಾಗಿದೆ.

ಕಸವೆಂದು ಅಲ್ಲಲ್ಲಿ ಬಿಸಾಡಿ ಮಾಲಿನ್ಯ ಮಾಡುವ ಈ ಕಾಲದಲ್ಲಿ ಕಸದಿಂದಲೇ ಹೇಗೆಲ್ಲಾ ಉತ್ತಮ ಕಲಾಕೃತಿಗಳನ್ನು ಮಾಡಿ ತಮ್ಮ ಮನೆಯ ಸೌಂದರ್ಯವನ್ನು ಹೆಚ್ಚಿಸಬಹುದು ಎಂಬುದನ್ನು ಸುಮತಿಯವರು ಮಾಡಿ ತೋರಿಸಿದ್ದಾರೆ.

ಇವುಗಳನ್ನು ಸುಮತಿ ಪ್ರಚಾರಕ್ಕಾಗಿಯೋ ಅಥವಾ ಹಣ ಸಂಪಾದನೆಗಾಗಿಯೂ ಮಾಡಿಲ್ಲ. ಪರಿಸರ ನಾಶವಾಗುತ್ತಿರುವುದರಿಂದ ಪರಿಸರದ ಉಳಿವು ರಕ್ಷಣೆ ನಮ್ಮ ಜವಾಬ್ದಾರಿ; ಅದಕ್ಕಾಗಿ ಇಂತಹ ಕಲಾಕೃತಿಗಳು ಮಾಲಿನ್ಯರಹಿತವಾಗಿದ್ದು, ಪರಿಸರಕ್ಕೆ ಸಹಾಯವಾಗಬಲ್ಲದು ಎಂಬ ಕಾರಣಕ್ಕೆ ಮಾಡುತ್ತಿರುವುದು ಎಂಬುದು ಸುಮತಿ ಅವರ ಮನದಾಳದ ಮಾತು.

## ಊರ ಜನರಿಂದ ಪ್ರಶಂಸೆ

ಕಲಾವಿದೆ ಸುಮತಿ ಅವರು ಮಾಡಿದ ಕಲಾ ಪ್ರಪಂಚವನ್ನು ನೋಡಿ ಪರಿಸರ ಕಾಳಜಿಗೆ ಮೆಚ್ಚಿ ಊರ ಜನರಿಂದ ಮತ್ತು ಬೇರೆ ಊರಿನ ಜನರಿಂದ ಅಭಿನಂದನೆಯ ಮಹಾಪೂರವೇ ಹರಿದುಬಂದಿದೆ. ಕುಗ್ರಾಮವಾದ ಕೆಮ್ರಾಲ್ ಅನ್ನು ತಮ್ಮ ಕಲಾ ಶ್ರೀಮಂತಿಕೆಯಿಂದ ಎಲ್ಲರೂ ಮೆಚ್ಚುವಂತೆ ಮಾಡಿದ್ದಾರೆ.

ಇವರ ಮನೆ ಶಾಲಾ ವಿದ್ಯಾರ್ಥಿಗಳ ಪಿಕ್‌ನಿಕ್ ಸ್ಪಾಟ್ ಆಗಿಯೂ ರೂಪುಗೊಂಡಿದೆ. ಕಿನ್ನಿಗೋಳಿಯ ಅಕ್ಕಪಕ್ಕದ ಸರ್ಕಾರಿ ಖಾಸಗಿ, ಖಾಸಗಿ ಅನುದಾನಿತ ಶಾಲೆ, ಕಾಲೇಜು, ಪದವಿ ಕಾಲೇಜು, ವಿದ್ಯಾರ್ಥಿಗಳಿಗೆ ಅಲ್ಲಿಯ ಶಿಕ್ಷಕರು ಒಂದು ದಿನದ ಪಿಕ್‌ನಿಕ್ ಎಂಬಂತೆ ಕರೆದುಕೊಂಡು ಬರುತ್ತಾರೆ. ನಿರುಪಯುಕ್ತ ವಸ್ತುಗಳಿಂದ ಹೇಗೆಲ್ಲಾ ಮನೆಯ ಮೆರಗನ್ನು ಹೆಚ್ಚಿಸಬಹುದು ಎಂಬುದನ್ನು ಸುಮತಿ ಇಲ್ಲಿಗೆ ಭೇಟಿ ನೀಡುವ ಜನರಿಗೆ ವಿವರಿಸುತ್ತಾರೆ.

## ಮನೆಯೇ ಗ್ಯಾಲರಿಯಾಗಿ

ತಾವು ರಚಿಸಿದ ಕಲಾಕೃತಿಗಳನ್ನು ಮನೆ ತುಂಬಾ ಇರಿಸಿಕೊಂಡಿರುವುದರಿಂದ ಮನೆಯೇ ಗ್ಯಾಲರಿಯಾಗಿ ಮಾರ್ಪಾಡಾಗಿದೆ. ಎಲ್ಲರೂ ಕೂಡ ಊರಿನಲ್ಲಿ ಅಲ್ಲಲ್ಲಿ ಕಸ ಹಾಕುವುದನ್ನು ಬಿಟ್ಟು ಆ ಕಸದಿಂದಲೇ ಬೇರೆ ಬೇರೆ ರೀತಿಯ ಕಲಾಕೃತಿ ರಚಿಸಬಹುದು ಎಂಬುದನ್ನು ಕಲಿಸಿಕೊಡುತ್ತಿದ್ದಾರೆ.

ಒಡೆದ ಮೊಟ್ಟೆಯ ಹೊರ ಕವಚದಿಂದ ಕಲಾಕೃತಿ, ಖಾಲಿ ಪ್ಲಾಸ್ಟಿಕ್ ಬಾಟಲಿಗೆ ಸುಂದರ ವಿನ್ಯಾಸ, ತಂಪು ಪಾನೀಯ ಬಳಕೆ ಮಾಡಿದ ಬಾಟಲುಗಳಲ್ಲಿ ಕಲಾಕೃತಿಗಳು, ತೆಂಗಿನಕಾಯಿ ಚಿಪ್ಪಿನಲ್ಲಿ ವಿಭಿನ್ನ ಬಗೆಯ ಕಲಾಕೃತಿ, ಗರಿಕೆ ಹುಲ್ಲಿನಲ್ಲಿ ಬುಟ್ಟಿ, ಪ್ರಸಾದಕ್ಕಾಗಿ ಕೊಡುವ ಬ್ಯಾಗ್‌ನಿಂದ ವಿಭಿನ್ನ ಹಾರಗಳು..., ಹೀಗೆ ಹಲವು ಕಲಾಕೃತಿಗಳು ಗಮನ ಸೆಳೆಯುವಂತಿವೆ. ಪೇಟೆ ಅಥವಾ ಮಾಲ್‌ಗಳಲ್ಲಿ ಸಿಗುವ ದುಬಾರಿ ವೆಚ್ಚದ ಅಲಂಕಾರಿಕ ವಸ್ತುಗಳನ್ನು ತಂದು ಮನೆಯ ಶೃಂಗಾರ ಮಾಡುವ ಬದಲು ಇಂತಹ ಪರಿಸರ ಸ್ನೇಹಿ ವಸ್ತುಗಳಿಂದ ಮನೆಯನ್ನು ಅಲಂಕರಿಸುವುದು ಸೂಕ್ತ.